ಈ) ಈ ಯೋಜನೆಯಿಂದ ಒಟ್ಟು ಎಷ್ಟು ಎಕರೆ ಭೂಮೀನಿಗೆ ನೀರಾವರಿ ಅನುಕೂಲವಾಗುವುದು?

ಉ) ಈ ಯೋಜನೆಗಾಗಿ ಮುಳಗಡೆ ಆಗತಕ್ಕ ಖಾಸಗಿ ಹಾಗೂ ಸರ್ಕಾರಿ ಜಮೀನೆಷ್ಟು?

ಶ್ರೀ ಎಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಇಲ್ಲ.

ಆ) ಹೌದು.

ಇ) 382.40 ಕೋಟಿ ರೂಪಾಯಿಗಳು (1990-91ರ ಪಟ್ಟಿಯ ಪ್ರಕಾರ)

ಈ) 2,34,000 ಎಕರೆಗಳು.

ಉ) ಖಾಸಗಿ ಭೂಮೀನು 320 ಎಕರೆಗಳು ಸರ್ಕಾರಿ ಜಮೀನು 315 ಎಕರೆಗಳು (ಅರಣ್ಯ)

**ರಾಜ್ಯದಲ್ಲಿ ಕೆಲವು ರಸ್ತೆಗಳನ್ನು ಮೇಲ್ದರ್ಜೆಗೆರಿಸುವುದು**

131-ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆಲವು ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಲು ತೀರ್ಮಾನಿಸಿರುವ 4600 ಕಿ.ಮೀ. ಜಿಲ್ಲಾಪರಿಷತ್ ರಸ್ತೆಗಳ ಪೈಕಿ ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆ ಮೇಲ್ದರ್ಜೆಗೆ ಏರಿಸಲಾಗುತ್ತಿದೆ?

ಆ) ಅವುಗಳು ಯಾವುವು? (ಹೋಬಳಿ, ಹಳ್ಳಿ ಹಾಗೂ ರಸ್ತೆಗಳು ಎಲ್ಲಿಂದ ಎಲ್ಲಿಗೆ ಎಂದು ಪೂರ್ಣ ಮಾಹಿತಿ ನೀಡುವುದು)

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ 50.ಕಿ.ಮೀ. ಜಿಲ್ಲಾಪರಿಷತ್ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದು.

ಆ) ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನ ಮಾಡಲಾಗುವುದು.

**ಮೈಸೂರು ಜಿಲ್ಲೆಗೆ 91-92ನೇ ಸಾಲಿನಲ್ಲಿ ಮಂಜೂರಾದ ಕಿರು ನೀರಾವರಿ ಯೋಜನೆಗಳು**

ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಮಟ್ಟಣ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಗೆ 1991-92ರಲ್ಲಿ ಮಂಜೂರು ಆಗಿರುವ ಕಿರು ನೀರಾವರಿ ಯೋಜನೆಗಳೆಷ್ಟು? ಹಾಗೂ ಅವು ಯಾವ ಹಂತದಲ್ಲಿವೆ?

ಆ) ಪಿರಿಯಾಪಟ್ಟಣ ಕ್ಷೇತ್ರಕ್ಕೆ 1991-92ರಲ್ಲಿ ಮಂಜೂರಾಗಿರುವ ಗ್ರಾಮಾಂತರ ನೀರಾವರಿ (ಎನ್‌ಆರ್‌ಡಬ್ಲ್ಯೂಎಸ್), ಕಿರು ನೀರಾವರಿ, ಕೇಂದ್ರ ನೀರಾವರಿ (ಎಆರ್‌ಡಬ್ಲ್ಯೂಎಸ್) ಯೋಜನೆಗಳೆಷ್ಟು?

ಇ) ಅವುಗಳ ಕೆಲಸಗಳು ಅಪೂರ್ಣವಾಗುವುದಕ್ಕೆ ಕಾರಣಗಳೇನು? ಮತ್ತು ಯಾವಾಗ ಮುಗಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿರುವ 11 ತಾಲ್ಲೂಕುಗಳಿಗೆ 1991-92ನೇ ಸಾಲಿನಲ್ಲಿ 67 ಕಿರು ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಈ ಕಾಮಗಾರಿಗಳ ಹಂತಗಳು ಕೆಳಗಿನಂತಿವೆ.

| | | |
|---|---|---|
| 1. | ಅಂದಾಜು ಮಂಜೂರಾಗಬೇಕಾಗಿರುವ ಯೋಜನೆಗಳು | 12 |
| 2. | ಅಂದಾಜು ಪಟ್ಟಿ ಮಂಜೂರಾಗಿ ಜಲಮೂಲ ಇತ್ಯರ್ಥವಾಗಬೇಕಾಗಿರುವ ಯೋಜನೆಗಳು | 7 |
| 3. | ಕೊಳವೆಬಾವಿ ಕೊರೆಯುವ ಯೋಜನೆಗಳು | 16 |
| 4. | ರೈಸಿಂಗ್ ಮೈನ್ ಕೆಲಸ ಮುಗಿದಿರುವ ಯೋಜನೆ | 11 |
| 5. | ಎಲ್ಲಾ ಕೆಲಸಗಳು ಮುಗಿದಿದ್ದು ವಿದ್ಯುಚ್ಛಕ್ತಿ ಬೇಕಾಗಿರುವ ಯೋಜನೆಗಳು | 14 |
| 6. | ನೀರು ಸರಬರಾಜು ಮಾಡಲಾಗಿರುವ ಯೋಜನೆಗಳು | 7 |
| | ಒಟ್ಟು | 67 |

ಆ) ಯೋಜನೆಗಳು ವಿವರ 1991-92ನೇ ಸಾಲಿನಲ್ಲಿ ಮಂಜೂರಾಗಿರುವ ಯೋಜನೆಗಳು:

| | | |
|---|---|---|
| ಅ. | ಎನ್‌ಆರ್ ಡಬ್ಲ್ಯೂ ಎಸ್ | 3 |
| ಆ. | ಕಿರು ನೀರು ಸರಬರಾಜು | 11 |
| ಇ. | ಎ.ಆರ್. ಡಬ್ಲ್ಯೂ | 7 |

ಇ) ಎಸ್‌ಆರ್‌ಡಬ್ಲ್ಯೂಎಸ್ ಮತ್ತು ಎಆರ್‌ಡಬ್ಲ್ಯೂಎಸ್ ಯೋಜನೆಗಳನ್ನು 3 ವರ್ಷಗಳಲ್ಲಿ ಮತ್ತು ಕಿರು ನೀರು ಸರಬರಾಜು ಯೋಜನೆಗಳನ್ನು ಒಂದು ವರ್ಷದಲ್ಲಿಯೇ ಪೂರ್ಣಗೊಳಿಸುವ ಉದ್ದೇಶವಿದೆ. ಆದರೆ ಕೆಲವು ಯೋಜನೆಗಳಲ್ಲಿ ಜಲಮೂಲ ಇತ್ಯರ್ಥವಾಗದೆ ವಿಳಂಬವಾಗುವ ಸಾಧ್ಯತೆ ಇರುತ್ತದೆ.

**ತುಮಕೂರು.ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ನೀರಿನ ಸೌಕರ್ಯ**

191-ಶ್ರೀ ಟಿ.ಬಿ. ಜಯಚಂದ್ರ (ಕಳ್ಯಂಬೆಳ್ಳ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ತುಮಕೂರು ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ಶಾಶ್ವತವಾಗಿ ಹಿಂದುಳಿದ ಜಿಲ್ಲೆಗಳಾಗಿದ್ದು ಯಾವುದೇ ನೀರಾವರಿ ಸೌಕರ್ಯ ಇಲ್ಲಿಯವರೆಗೂ ಇಲ್ಲದೇ ಇರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ ಈ ಜಿಲ್ಲೆಗಳಿಗೆ ನೀರನ್ನೊದಗಿಸಲು ಭದ್ರಾ ಮೇಲ್ದಂಡೆ ಮತ್ತು ನೇತ್ರಾವತಿ ಯೋಜನೆಗಳ ಅನುಷ್ಠಾನದಿಂದ ಸಾಧ್ಯವೇ?*

*ಇ) ಹಾಗಿದ್ದಲ್ಲಿ ಈ ಯೋಜನೆಗಳ ಹಂತ ಮತ್ತು ಸರ್ಕಾರದ ಕಾರ್ಯಕ್ರಮ ಏನು?*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು) :

ಅ) ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳ ಹಲವು ಪ್ರದೇಶಗಳಿಗೆ ಮಧ್ಯಮ ಮತ್ತು ಸಣ್ಣ ನೀರಾವರಿ ಸೌಲಭ್ಯ ಇದೆ.